ಓ.ಎಸ್.ನಂ.132/2022

ಪಿ ಡಬ್ಲ್ಯೂ: 2

ದಿನಾಂಕ 14.08.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲು: 2 ನೇ ಪ್ರತಿವಾದಿ ಪರ ವಕೀಲರಿಂದ:**

ನಾನು ಎಸ್ ಎಸ್ ಎಲ್ ಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಖರೀದಿಯ ಕಾಲಕ್ಕೆ ಹಾಜರಿರಲಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿ ಮತ್ತು ನಾನು ಸಹೋದರರು ಎಂದರೆ ಸರಿ. ನಾನು ಬ್ಯಾಡಗಿ ತಾಲೂಕಿನ ಅಗಸನಹಳ್ಳಿ ಗ್ರಾಮದಲ್ಲಿ ವಾಸ ಇರುತ್ತೇನೆ. 1 ನೇ ಪ್ರತಿವಾದಿ ಎಲ್ಲಿ ವಾಸ ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ಹಲಗೇರಿಯಲ್ಲಿ ವಾಸ ಇರುತ್ತಾರೆ. ನನಗೆ ಹುಚ್ಚಪ್ಪ, ಹನುಮಂತಪ್ಪ ಮತ್ತು ರಿಂದಮ್ಮ ಜಗದೀಶ, ಮಂಜಪ್ಪ ಮತ್ತು ನಾನು ಕುಟುಂಬದವರು ಎಂದರೆ ಸರಿ.

2. ನಮ್ಮ ಕುಟುಂಬಕ್ಕೆ ಸಂಬಂಧಿಸಿದಂತೆ ಆಸ್ತಿ ಸಂಖ್ಯೆ 178/2, 173/2, 174/2, 178/ಅ ಆಸ್ತಿಗಳು ಇವೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿದ್ದು ಹಲಗೇರಿಯಲ್ಲಿ ಇವೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಿದ್ದು ಸಾಕ್ಷಿಯು ಸದರಿ ಪೋಟೋದಲ್ಲಿ ಕಾಣಿಸುವ ಮನೆ ಅಗಸನಹಳ್ಳಿಯಲ್ಲಿರುವ ತನ್ನ ಮನೆ ಎಂದು ಗುರುತಿಸಿದ್ದು, ಸದರಿ ಪೋಟೋಗವನ್ನು **ನಿಡಿ 1** ಎಂದು ಗುರುತಿಸಲಾಯಿತು. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಈ ಪೂರ್ವದ ಪಾಲುವಾಟ್ನಿಯಲ್ಲಿ ನಿಡಿ 1 ರ ಮನೆಯ ಆಸ್ತಿ ಮತ್ತು ಹಲಗೇರಿಯಲ್ಲಿರುವ ಆಸ್ತಿಗಳನ್ನು ಸೇರಿಸಿರುವುದಿಲ್ಲ.

3. ದಾವಾ ಆಸ್ತಿ ಮೂಲತಃ ನನ್ನ ತಂದೆಯ ತಂದೆ ಆಸ್ತಿಯಾಗಿರುತ್ತದೆ. ಆತನಿಗೆ ದಾವಾ ಆಸ್ತಿ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಆ ಕುರಿತು ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ. ದಾವಾ ಆಸ್ತಿಗೆ ವಾದಿಯರು ತೆರಿಗೆ ಪಾವತಿ ಮಾಡುತ್ತಿರುತ್ತಾರೆ. ಸದರಿ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಆ ಕಾರಣ ನಾನು ಊಹೆ ಮೇಲೆ ಹೇಳುತ್ತಿದ್ದೇನೆ ಎಂದರೆ ಸರಿ. ದಾವಾ ಆಸ್ತಿಯನ್ನು 2 ನೇ ಪ್ರತಿವಾದಿ ಖರೀದಿಯ ದಿನದಿಂದ ದಾವಾ ಆಸ್ತಿಯ ಕಬ್ಜಾದಲ್ಲಿರುತ್ತಾನೆ ಎಂದರೆ ಸರಿ. ದಾವಾ ಆಸ್ತಿಯನ್ನು ವಾದಿಯರು ನೋಡಿರುವುದಿಲ್ಲ ಎಂದರೆ ಸರಿಯಲ್ಲ.

4. ದಾವಾ ಆಸ್ತಿಯಲ್ಲಿ ಪ್ರಸ್ತುತ ಏನು ಇದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ದಿನಾಂಕ 23.11.2021 ರಂದು ಮಾರಾಟ ಮಾಡಿರುತ್ತಾರೆ. ಸದರಿ ಖರೀದಿ ಪತ್ರವನ್ನು ನಾನು ನೋಡಿರುವುದಿಲ್ಲ. ದಾವಾ ಆಸ್ತಿ ಖರೀದಿ ಪತ್ರವು 1.5 ಲಕ್ಷಕ್ಕೆ ಆಗಿರುತ್ತದೆ. ಖರೀದಿ ಹಣ

ಪಾವತಿಯ ಕುರಿತು ನನಗೆ ಮಾಹಿತಿ ಇರುವುದಿಲ್ಲ. ಖರೀದಿ ಕಾಲಕ್ಕೆ ದಾವಾ ಆಸ್ತಿಯ ಪಹಣಿಯಲ್ಲಿ 1 ನೇ ಪ್ರತಿವಾದಿಯ ಹೆಸರು ಇತ್ತು. ಆ ಸಮಯದಲ್ಲಿ ವಾದಿಯರ ಹೆಸರು ಪಹಣಿಯಲ್ಲಿ ಇರಲಿಲ್ಲ ಎಂದರೆ ಸರಿ. ಆ ಕಾರಣ ವಾದಿಗಳು ಖರೀದಿ ಪತ್ರಕ್ಕೆ ಯಾವುದೇ ಸಂಬಂದ ಇಲ್ಲಾ ಎಂದರೆ ಸರಿಯಲ್ಲ.

5. ಈ ದಾವೆ ಹೂಡುವ ಪೂರ್ವದಲ್ಲಿ 2 ನೇ ಪ್ರತಿವಾದಿಗೆ ನೋಟಿಸು ನೀಡಿರುವ ಕುರಿತು ನನಗೆ ಮಾಹಿತಿ ಇರುವುದಿಲ್ಲ. ದಾವಾ ಆಸ್ತಿ ಮಾರಾಟದ ಸಮಯದಲ್ಲಿ ವಾದಿಯರಿಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮಾರಾಟದ ಕುರಿತು ವಾದಿಯರಿಗೆ ಯಾವ ದಿನಾಂಕದಂದು ತಿಳಿದಿರುತ್ತದೆ ಎಂದು ನನಗೆ ಗೊತ್ತಿಲ್ಲ. ವಾದಿಗಳು ಹೇಳಿದ ನಂತರ ನನಗೆ ತಿಳಿದಿರುತ್ತದೆ ಎಂದರೆ ಸರಿ. ವಾದಿಯು ಹೇಳಿದಂತೆ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಯರಿಗೆ ಅನೂಕುಲವಾಗಲಿ ಎಂದು 2 ನೇ ಪ್ರತಿವಾದಿಯವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ನಾನು ಮತ್ತು ವಾದಿಯರು ಹೆಚ್ಚುವರಿ ಹಣ ನೀಡುವಂತೆ ಬೇಡಿಕೆ ಇಟ್ಟು ಈ ಸುಳ್ಳು ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ. ಹಲಗೇರಿ ಮತ್ತು ಅಗಸನಹಳ್ಳಿಯಲ್ಲಿರುವ ಕುಟುಂಬದ ಆಸ್ತಿಗಳನ್ನು ಬಿಟ್ಟು ಕೇವಲ ದಾವಾ ಆಸ್ತಿಯ ವಿರುದ್ಧ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

Sd/-

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.